# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 156, ಶ್ರೀನಗರ ಬೆಂಗಳೂರು.

ಸಂಖ್ಯೆ: ಸ.ಅ/ವಾ–156//2022–23 ದಿನಾಂಕ: 16–07–2022

### ವಾರ್ಡ್ ಸಮಿತಿ ಸಭೆಯ ನಡವಳಿಗಳು

***********

ವಿಷಯ: ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020–21, ದಿನಾಂಕ: 21–09–2020ರ ಆದೇಶದಂತೆ ದಿನಾಂಕ: 16–07–2022 ಶನಿವಾರ ವಾರ್ಡ್ ಸಂಖ್ಯೆ: 156, ಶ್ರೀನಗರ ವಾರ್ಡ್ ಕಛೇರಿಯಲ್ಲಿ ನಡೆದ ಜುಲೈ ತಿಂಗಳ 2ನೇ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸ್ಥಳ: ಬಿಬಿಎಂಪಿ ವಾರ್ಡ್ ಕಛೇರಿ, ಶ್ರೀನಗರ,
ಸಮಯ: ಬೆಳಿಗ್ಗೆ 11.00 ಗಂಟೆಗೆ

ಹಾಜರಿದ್ದ ವಾರ್ಡ್ ಸಮಿತಿ ಸದಸ್ಯರು

1. ಶ್ರೀ. ಹೆಚ್.ವಿ. ಯರ್ರಪ್ಪ ರೆಡ್ಡಿ, (ಕಾ.ಪಾ.ಅ, ಚಿಕ್ಕಪೇಟೆ), ನೋಡಲ್ ಅಧಿಕಾರಿಗಳು – ಅಧ್ಯಕ್ಷರು
2. ಶ್ರೀ. ವೆಂಕಟಮಳವಯ್ಯ, ಸಹಾಯಕ ಅಭಿಯಂತರರು – ಸದಸ್ಯ ಕಾರ್ಯದರ್ಶಿ
3. ಶ್ರೀಮತಿ. ಕವಿತಾ (ಹಿ.ಆ.ಪ) – ಸದಸ್ಯರು
4. ಶ್ರೀ. ರಾಕೇಶ್ – ಸದಸ್ಯರು
5. ಶ್ರೀ. ಬಿ. ರವಿಶಂಕರ್, – ಸದಸ್ಯರು
6. ಶ್ರೀ. ಜೆ.ಕೆ. ಕೃಷ್ಣ – ಸದಸ್ಯರು
7. ಶ್ರೀ. ಪ್ರಕಾಶ್ – ಎ.ಎಸ್.ಐ (ಬ.ಗು)
8. ಶ್ರೀ. ಹನುಮಂತಪ್ಪ. ಬಿ – ಸದಸ್ಯರು
9. ಶ್ರೀಮತಿ. ಮೀನಾ. ಆರ್ – (ಕಿ.ಆ.ಪ)
10. ಶ್ರೀಮತಿ.ಜಿ. ಸೌಮ್ಯ – ಸದಸ್ಯರು
11. ಶ್ರೀ. ತೇಜಸ್ – ಸದಸ್ಯರು
12. ಶ್ರೀ. ಪ್ರಮೋದ್ – ಸದಸ್ಯರು
13. ಶ್ರೀ. ಮಂಜುನಾಥ್– ಬಿ.ಡಬ್ಲ್ಯೂ.ಎಸ್.ಎಸ್.ಬಿ
14. ಶ್ರೀ. ಎಸ್. ನರಸಿಂಹಮೂರ್ತಿ– ಸದಸ್ಯರು

ಸಭೆಯಲ್ಲಿ ಉಪಸ್ಥಿತರಿದ್ದ ವಾರ್ಡ್ ನಂ. 156 ರ ನೋಡೆಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಸಭೆಯ ಅಧ್ಯಕ್ಷರು ತಿಳಿಸಿರುವ ಮೇರೆಗೆ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರನ್ನು / ಅಧಿಕಾರಿಗಳನ್ನು ಮತ್ತು ಸ್ಥಳೀಯ ಸಾರ್ವಜನಿಕ್ರರಿಗೆ ಸ್ವಾಗತಿಸುತ್ತಾ ಈ ಕೆಳಕಂಡ ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು.

1) ಮಳೆಗಾಲ ಪ್ರಾರಂಭವಾಗಿರುವುದರಿಂದ ರಸ್ತೆ ಬದಿಯಲ್ಲಿ ನಿಂತಿರುವ ನೀರಿನ ಮೇಲೆ ಬ್ಲೀಚಿಂಗ್ ಪೌಡರ್ ಸಿಂಪಡಿಸಿ ಸೊಳ್ಳೆಗಳು ಬಾರದಂತೆ ತಡೆಗಟ್ಟಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

2) ಶ್ರೀನಗದಲ್ಲಿ ಎಲ್.ಇ.ಡಿ ಲೈಟ್‌ನ್ನು ಅಳವಡಿಸಲು ಸೂಚಿಸಲಾಗಿರುತ್ತದೆ.



Scanned with CamScanner

3) ಮಳೆಗಾಲದಲ್ಲಿ ಗಾಳಿ ಮಳೆಗೆ ಬಿದ್ದ ಮರಗಳನ್ನು ಕೂಡಲೇ ತೆರವುಗೊಳಿಸಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

4) ಶ್ರೀನಗರ ಬಸ್ ನಿಲ್ದಾಣದಲ್ಲಿ ಅಂಗಡಿ ಮಾಲೀಕರುಗಳು ಗಲೀಜು ನೀರನ್ನು ರಸ್ತೆಗೆ ಬಿಡುತ್ತಿದ್ದು ಇದನ್ನು ಕೂಡಲೇ ತಡೆಯಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

5) ನರಿಹಳ್ಳದಲ್ಲಿ ಕಸದ ಗಾಡಿಗಳು ಸರಿಯಾದ ಸಮಯಕ್ಕೆ ಬರುತ್ತಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಗಿರುತ್ತದೆ.

6) ಕಾಳಿದಾಸ ವೃತ್ತದಲ್ಲಿ ಅನಧಿಕೃತ ಪಾರ್ಕಿಂಗ್ ಹೆಚ್ಚಾಗಿದ್ದು, ಬಿ.ಎಂ.ಟಿ.ಸಿ ಬಸ್‌ಗಳು ಬರುತ್ತಿಲ್ಲವೆಂದು ಸದಸ್ಯರು ತಿಳಿಸಿರುತ್ತಾರೆ.

7) ಸಭೆಯಲ್ಲಿ ಹಾಜರಿದ್ದ ತಿಮ್ಮಯ್ಯನವರು 7ನೇ ಮುಖ್ಯರಸ್ತೆಯಲ್ಲಿ ಸ್ಲಂ ಬೋರ್ಡ್ ರವರಿಂದ ನಿರ್ಮಿಸಲಾಗಿರುವ ಮನೆಗಳನ್ನು ಪೂರ್ಣಗೊಳಿಸಿರುವುದಿಲ್ಲವೆಂದು ಸಭೆಯಲ್ಲಿ ತಿಳಿಸಿರುತ್ತಾರೆ.

8) ರಸ್ತೆಗಳಲ್ಲಿ ಹಸುಗಳ ಹಾವಳಿ ಹೆಚ್ಚಾಗಿದ್ದು, ಇವುಗಳನ್ನು ನಿಯಂತ್ರಿಸಲು ಪಶು ಸಂಗೋಪನಾ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.

9) ಪಿ.ಇ.ಎಸ್ ಕಾಲೇಜ್ ಹತ್ತಿರ ಚರಂಡಿಯ ಚಪ್ಪಡಿ ಮುರಿದಿದ್ದು ಅದನ್ನು ಸರಿಪಡಿಸಲು ಸೂಚಿಸಲಾಗಿರುತ್ತದೆ.

10) ಸಭೆಯಲ್ಲಿ ಹಾಜರಿದ್ದ ತಿಮ್ಮೇಗೌಡ ರವರು 11ನೇ ಮುಖ್ಯರಸ್ತೆಯಲ್ಲಿ ರಸ್ತೆ ಬದಿ ಚರಂಡಿಯನ್ನು ಹೊಸದಾಗಿ ನಿರ್ಮಿಸಲು ಮನವಿ ಸಲ್ಲಿಸಿರುತ್ತಾರೆ ಮತ್ತು 7ನೇ ಮುಖ್ಯರಸ್ತೆ ಬೋರ್‌ವೆಲ್ ದುರಸ್ಥಿ ಪಡಿಸಲು ತಿಳಿಸಲಾಗಿರುತ್ತದೆ.

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 156, ಶ್ರೀನಗರ

ಅಧ್ಯಕ್ಷರು 16/7
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 156, ಶ್ರೀನಗರ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್.ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿಗಾಗಿ ಸಲ್ಲಿಸಿದೆ.
4. ಮಾನ್ಯ ಉಪ ಆಯುಕ್ತರು ((ಆಡಳಿತ) ರವರ ಮಾಹಿಗಾಗಿ ಸಲ್ಲಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಮಾಹಿಗಾಗಿ ಸಲ್ಲಿಸಿದೆ.
6. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.

Scanned with CamScanner